ತಿಂಗಳಿಗೆ ಅಂತ ಜ್ವಾಡಣಿ ಜೋಡಿಸ್ಕಂಡು ಬಾಡಗಿ ಮನಿ ಹಿಡ್ದಾತು. ಎಲ್ಡ ತಿಂಗಳಿದ್ದದ್ದು ಎಂಟ ತಿಂಗಳ ದಾಟತು. ಸುಡಗಾಡ ಕೊರೊನಾ ಸಂಬಂಧ ಮನಿ ರಿಪೇರಿ ದಗದ ಹನುಮಂತನ ಬಾಲದ್ವಾಂಗ ಆತು. ಮನೀ ಒಳಗಽ ಒಂದೊಂದ ಖೋಲಿ ರಿಪೇರಿ ಆಗೂಮುಂದ್ಲೂ ಅಪ್ಪನ ಸ್ಕೂಟರ್ ಹಿಂದ ಕುಂತ ಬಂದುನೋಡ್ತಿದ್ದೆ. 'ಗೌಡತಿ ತಲಿ ಚುರ್ಕ ಐತ್ರಿ ಯಜಮಾನ್ರ' ಅಂದಿದ್ನಂತೆ ಮೇಸ್ತ್ರಿ. ಕೊರೊನಾಕ್ಕ ಹೆದರಿ ಲಾಕ್‌ಡೌನ್ ಸುರುವಾತು. ಪ್ರದೀಪ ಅವನ ಹೆಂಡತಿ ಪೂಣಾದಾಗ ಉಳದ್ರು. ವರ್ಕ್ ಫ್ರಂ ಹೋಮ್ – ಅಂತಿದ್ದ ಪ್ರದೀಪ. ಒಂದೆರಡು ತಿಂಗಳು ದಾಟೂದ್ರಾಗ ಒಂದಿನಾ, ಬೆಂಗಳೂರ್ನಾಗ ಕಂಪನಿ ಹುಡಕ್ಕೊಂತೀನಿ. ಊರಿಗ್ ಬರ್ತಿನಿ ಅಂದ, ಬಂದ. ಮಗ ಬರ್ತಾನಂತ ಕೆಲಸದವರಿಗೆ ಜಬರದಸ್ತಿ ಮಾಡ್ಸಿ ಮನಿ ಪ್ರವೇಶದ ನೇಮಾ ಮಾಡ್ಸಿದ ಅಪ್ಪ. ಬಾಡಿಗಿ ಮನಿಯಿಂದ ಹಿಂಗಽ ಎಲ್ಲ ಎಲ್ಲ ಕಟ್ಟಿ ಸೇರಸಿ ಹೇರಿಕೊಂಡು ನಮ್ಮನಿ ಅಂತ ಬಂದಾಯ್ತು. ಮನಿ ರಿಪೇರಿ ನಡದಾಗ ಅಜ್ಜನ ಜೋಡಿ ಬಂದು ಬಂದು, 'ಯಜ್ಜಾ ಇದ್ ಯಾಕ? ಯಜ್ಜಾ ಇದ್ ನಂಗ?' ಅಂತ ಓಡಾಡಿಕೊಂಡಿದ್ದ ಮಕ್ಕಳು ಈಗ ಯಾಕೋ ಉಸಿರು ಸಿಕ್ಕಾಂಗ ಮಾಡತೊಡಗಿದ್ದರು. ದಿನಾ ಎಲ್ರ ಹೊಟ್ಟಿ–ನೆತ್ತಿ ನೋಡ್ತಿದ್ದ ನನಗೂ, ಯಾಕೋ ಎಲ್ಲೋ ಏನೋ ಇರುಸುಮುರುಸು. ಪ್ರದೀಪನ ಹೆಂಡತಿಯೇನು ಜಗಳಗಂಟ ಹುಡುಗಿ ಅಲ್ಲ. ಆದ್ರೂ...

ಪ್ರದೀಪ ಅವನ ಹೆಂಡತಿ ಮೊದಲಿನ್ಹಾಂಗ ಸಲೀಸಾಗಿರ್ಲಿಲ್ಲ ಅನ್ನಿಸ್ತಿತ್ತು. ಅಪ್ಪಂಗೂ ಹಾಂಗಽಽ ಅನ್ನಿಸಿರಬೇಕು. ಒಂದಿನಾ ರಾತ್ರಿ ಅಪ್ಪ, "ಯಾಕ್ ಪ್ರದೀ, ಒಂಥರಾ ಅದೀ? ಇದೇನ್ ರೋಗ ಮನಷ್ಯಾರಗಿಂತ ದೊಡ್ಡದೈತೇನು? ಒಮ್ಮೊಮ್ಮಿ ಆಗ್ತಾವ, ಬರ್ತಾವ. ಬಂದಿದ್ದು ಹೋಗಾಕ ಬೇಕಲ್ಲ. ಸಮಸ್ಯಾಕ ಮನಷ್ಯ ಮುದಡಬಾರ್ದು. ಹಿಂದೊಮ್ಮಿ ಊರಾಂತ ಊರೇ ಪ್ಲೇಗ್ ಬಂದಾಗ, ಶಿಶುನಾಳ ಶರೀಫಜ್ಜ ಒಲಿ ಬೂದೀನ ಊರ ತುಂಬ ಹೊಡಸಿ, ಪ್ಲೇಗ್ ಓಡಿಸಿದ್ನಂತ. ಹಾಂಗಽ ದಾರೀ ಇರ್ತಾವ, ಸಿಗ್ತಾವ..." ಅಂತೇನೋ ಒಳ್ಳಾ ಹುರಪಲೆ ಹೇಳತಿರಬೇಕಾದ್ರ... ಕೆಂಡದ ಮ್ಯಾಲ ಕುಂಡಿ ಊರಿದವನ ಗತೇ ಪ್ರದೀಪ ಚಡಪಡಿಸಿ, ಹೂಂ ಅನ್ನದ ಉಹೂಂ ಅನ್ನದ ಖೋಲಿಗೆ ಎದ್ದು ಹೋಗಿದ್ದ. ನೌಕರಿ ಇಲ್ಲದ ಸಂಕಟಕ್ಕ ಹಾಂಗ ಮಾಡಾಕತ್ತಾಽನ ಅಂತ ನಾವು ನಮನಮಗ ಸಮಾಧಾನ ಹೇಳಿಕೊಂಡಾಗಿತ್ತು. ಆದ್ರ ಅಷ್ಟಽ ಇದ್ದಿರಾಕಿಲ್ಲ. ಮನಿ ಇಲ್ಲದ ಕಾಲದಾಗೂ ಮನಸಿನ ನಗಿ–ಹುರುಪು ನೇದು ಬಾಳೇವು ಮಾಡಿದ್ದವರು ನಾವಽ ಹೌದ? ಅನ್ನೂ ಹಾಂಗಿತ್ತು. ಏನೋ ಬಿಗಿ, ಎಂಥದೋ ಕೀಸರ, ಒಂದು ಅಂದ್ರ ಕಮ್ಮಿ, ಎರಡಂದ್ರ ಹೆಚ್ಚು ಅನ್ನೋ ರಣ. ಈ ಕರೋನಾ ತಂದ್ವಾಕಿದ ರೋಗ ದೇಹಕ್ಕೋ ಮನಸ್ಸಿಗೋ ತಿಳೀದ ಭ್ರಾಂತು.

ಇತ್ತಿತ್ತಲಾಗ, ಎಲ್ಲರೂ ಕುಂತ ಮಾತಾಡ್‌ಕೋತ ಉಣ್ಣೂ ಜಾಜ ತಪ್ಪಿತು. ಗಂಡ ಹೆಂಡತಿ ತಾಟ್ಟಬ್ಚಿಕೊಂಡು ಖೋಲಿಯಾಗ ಕೂತ್ರು. ಮನಿ ಹೋಗಿ ಪಿ.ಜಿ ಆದ್ವಾಂಗಾತ ಮಮ್ಮಿ– ಅಂದಿದ್ದಳು ಮಧು ಒಮ್ಮೆ. ಅಪ್ಪ – ಶಾಂಕರಿ, ಈ ಪ್ರದೀಪಂಗೊಂದು ಕೂಸು ಕುಡಿ ಚಿಗರ್ಬೇಕ ಕಣವ್ವಾ – ಅಂದಿದ್ದೇ ನೆಪ. ಪ್ರದೀಪನ ಹೆಂಡತಿನ್ನ ಆಡಕೊಳ್ಳೋ ಮಾತೇನೂ ಅದಾಗಿರಲಿಲ್ಲ. ಆದ್ರ ಅದ್ನ ಆಕಿ ಹಾಂಗ ಅಂದ್ಕೊಂಡ್ಳು. ಅಪ್ಪ ಎಂಥವಾ ಅಂತ ಗೊತ್ತಿರೋ ಪ್ರದೀಪನಾದ್ರೂ ತಿಳಿ ಹೇಳಬೌದಿತ್ತು, ಹಾಂಗಾಗಲಿಲ್ಲ. ಮನೀ ಒಳಗಽ ಒಂದ್ ನಮೂನಿ ಉಬ್ಬಸ ಹತ್ತಿದಾಂಗಾಗಿತ್ತು. ಅವ್ವ ಹಾಸಿಗ್ಯಾಗ ಕುಂತು ಸರೂ ರಾತ್ರೀಲೂ 'ಸುಡಗಾಡ ಕೊರೊನಾ ನನ್ನಾರ ಒಯ್ಬಾರ್ದಾ' ಅಂತ ಮುಳು ಮುಳು ಅಳಾಕಹತ್ತಿದ್ದಳು. ಯಾಕ, ಏನು, ಎಲ್ಲಿ ತಪ್ಪಲಾಕಹತ್ತದ... ನನಗಾಗಲೀ ಅಪ್ಪಗಾಗಲೀ ಅಂದಾಜಾಗಲಿಲ್ಲ. ಮಧು ತನ್ನ ಕಬರ್ಡಿನ ಬಾಗಿಲಿಗೆ ಸಾಯಿಬಾಬಾ ಫೋಟೊ ಅಂಟಿಸಿದ್ದು, ನನ್ನ ಅಡಗಿಗಿ ಒಂದ್ಹಳ್ಳು ಉಪ್ಪು ಕಮ್ಮಿಯಾಗೋದು, ಅವ್ವ ರಾತ್ರಿ ನರಳೋದು... ಎಲ್ಲ ಸಣ್ಣ ಪುಟ್ಟ ಕಿರಿಕಿರಿಗಳನ್ನ ಪ್ರದೀಪ ಆಡತೊಡಗಿದ್ದು ನಮಗೇನೂ ತಪ್ಪು ಅನ್ನಿಸಲಿಲ್ಲ. 'ತಾಯಿ ಸತ್ರ ಸ್ವಾದರ